ವಿಷಯ: ಮಾಗಡಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗ ಅಲ್ಪಸಂಖ್ಯಾತರ ಇಲಾಖೆಯಿಂದ ಮನೆಗಳ ನಿರ್ಮಾಣ.

2537 (3544)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ರಾಜ್ಯದಲ್ಲಿ ಈವರೆಗೆ ವಿವಿಧ ಯೋಜನೆಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ (ಪೂರ್ಣ ವಿವರ ನೀಡುವುದು)

ಆ) ಮಾಗಡಿ ತಾಲ್ಲೂಕಿನಲ್ಲಿ ನಿರ್ಮಿಸಿದ ಮನೆಗಳ ಸಂಖ್ಯೆ ಎಷ್ಟು?

ಶ್ರೀ ಮಾಲೀಕಯ್ಯ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾವತಿಯಿಂದ ಪ್ರವರ್ಗ-1ರ ಜನರು ವಾಸಿಸುವ ಗ್ರಾಮಗಳನ್ನು ಆಯ್ಕೆ ಮಾಡಿ 'ಬೆಳ್ಳಬೆಳಕು' ಕಾರ್ಯಕ್ರಮದಡಿ ಮನೆಗಳನ್ನು ನಿರ್ಮಿಸಿಕೊಡಲಾಗುತ್ತಿದೆ. ವಿವರವನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಆ) ಈ ಕಾರ್ಯಕ್ರಮದಡಿ ಮಾಗಡಿ ತಾಲ್ಲೂಕಿನಲ್ಲಿ ಯಾವುದೇ ಗ್ರಾಮವನ್ನು ಆಯ್ಕೆ ಮಾಡಿಲ್ಲ. ಆದ್ದರಿಂದ ಮನೆಗಳನ್ನು ನಿರ್ಮಿಸುವ ಕಾರ್ಯ ಕೈಗೊಂಡಿಲ್ಲ.

ಅನುಬಂಧ

1996-97ನೇ ಸಾಲಿನವರೆಗೆ ಬೆಳ್ಳಬೆಳಕು ಕಾರ್ಯಕ್ರಮದಡಿ ನಿರ್ಮಿಸಿರುವ ಮನೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ತೆಗೆದುಕೊಂಡ ಮನೆಗಳು	ಪೂರ್ಣಗೊಂಡವು	ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವ ಮನೆಗಳು
1.	ಬೆಂಗಳೂರು (ನಗರ)	12	12	-
2.	ಬೆಂಗಳೂರು (ಗ್ರಾಮಾಂತರ)	213	71	142
3.	ಬೆಳಗಾವಿ	24	15	9
4.	ಬಳ್ಳಾರಿ	55	48	7
5.	ಬಿಜಾಪುರ	50	50	-
6.	ಬೀದರ್	31	-	31
7.	ಚಿತ್ರದುರ್ಗ	30	30	-
8.	ಚಿಕ್ಕಮಗಳೂರು	5	5	-
9.	ಧಾರವಾಡ	28	28	-
10.	ದಕ್ಷಿಣಕನ್ನಡ	14	-	14
11.	ಹಾಸನ	13	13	-
12.	ಗುಲ್ಬರ್ಗಾ	60	60	-
13.	ಕೋಲಾರ	-	-	-
14.	ಕೊಡಗು	9	-	9
15.	ಮಂಡ್ಯ	45	29	16
16.	ಮೈಸೂರು	120	72	48
17.	ರಾಯಚೂರು	20	-	20
18.	ಶಿವಮೊಗ್ಗ	168	40	128
19.	ತುಮಕೂರು	50	48	2
20.	ಉತ್ತರಕನ್ನಡ	60	60	-
	ಒಟ್ಟು	1007	581	426